**ಸಂಖ್ಯೆ:** ಬಿಎಂಆರ್‌ಸಿಎಲ್/ಆರ್‌ಟಿಐ/0280/2015 **ದಿನಾಂಕ:** 11/09/2015

**ಮಾಹಿತಿ ಹಕ್ಕು ಅಧಿನಿಯಮ, 2005ರ ಉಪಬಂಧಗಳಡಿ ಬಿಎಂಆರ್‌ಸಿಎಲ್‌ಗೆ (ಸಾರ್ವಜನಿಕ ಪ್ರಾಧಿಕಾರವಾಗಿ) ಬಹಿರಂಗ ಪಡಿಸಬೇಕಾದ ಬಾಧ್ಯತೆ ಇಲ್ಲದಿರುವ ಬಾಬುಗಳ/ದಾಖಲೆಗಳ ಪಟ್ಟಿ**

ಮಾಹಿತಿ ಹಕ್ಕು ಅಧಿನಿಯಮ 2005ರ 8, 9 ಮತ್ತು 11ನೇ ಪ್ರಕರಣಗಳು ಅರ್ಜಿದಾರನಿಗೆ ಸಾರ್ವಜನಿಕ ಪ್ರಾಧಿಕಾರಗಳು ಬಹಿರಂಗ ಪಡಿಸಲು ಬಾಂಧ್ಯರಾಗಿಲ್ಲದಿರುವ ಮಾಹಿತಿಯನ್ನು ಗುರುತಿಸಿವೆ. ಅಲ್ಲದೇ, ಬಎಂಆರ್‌ಸಿಎಲ್ ಕಾರ್ಯತಂತ್ರ, ವೈಜ್ಞಾನಿಕ ಅಥವಾ ಆರ್ಥಿಕ ಹಿತಾಸಕ್ತಿಗೆ ಬಾಧಕವಾಗುವಂಥ ಮಾಹಿತಿಯನ್ನು ಅರ್ಜಿದಾರನಿಗೆ ಬಹಿರಂಗಪಡಿಸದಿರಬಹುದು. ವಾಣಿಜ್ಯ ರಹಸ್ಯ, ವ್ಯಾಪಾರ ರಹಸ್ಯ ಅಥವಾ ಬೌದ್ಧಿಕ ಆಸ್ತಿ ಒಳಗೊಂಡ ಮಾಹಿತಿಯನ್ನು ಬಹಿರಂಗಪಡಿಸುವುದರಿಂದ, ಅದು ನಮ್ಮ ಪೂರೈಕೆದಾರರು , ಮಾರಾಟಗಾರರು, ಗುತ್ತಿಗೆದಾರರು, ಖರೀದಿದಾರರು ಹಾಗೂ ಗ್ರಾಹಕರೂ ಸೇರಿದಂತೆ ಮೂರನೇ ಪಕ್ಷದಾರರ (ಪ್ರಕರಣ 8(1)(ಡಿ) ಮತ್ತು 11) ಸ್ವರ್ಧಾತ್ಮಕ ತೆಗೆ ದಕ್ಕೆಯಂಟು ಮಾಡಲಿರುವುದರಿಂದ ಅಂಥ ಮಾಹಿತಿಯನ್ನು ಬಹಿರಂಗ ಪಡಿಸಬೇಕಾಗಿಲ್ಲ. ನಂಬಿಕೆ ವಿಶ್ವಾಸದ ಸಂಬಂಧಕ್ಕೆ [ಪ್ರಕರಣ 8(1)(ಇ)] ಸಂಬಂಧಿಸಿದಂತೆ ಲಭ್ಯವಿರುವ ಮಾಹಿತಿಯನ್ನು ವ್ಯಾಪಕ ಸಾರ್ವಜನಿಕ ಹಿತಾಶಕ್ತಿಯನ್ನು ಹೊಂದಿದ್ದ ಹೊರತು ಹಂಚಿಕೊಳ್ಳತಕ್ಕದ್ದಲ್ಲ. ಅಲ್ಲದೇ ತನಿಖೆಗೆ [ಪ್ರಕರಣ 8(1)(ಎಫ್)] ಅಡ್ಡಿಯುಂಟು ಮಾಡಲಿರುವ ಮಾಹಿತಿಯನ್ನು ನಿರಾಕರಿಸತಕ್ಕದ್ದು. ಮಾರುಕಟ್ಟೆ ಮತ್ತು ಮಾರಾಟಗಳು, ಖರೀದಿ ಹಾಗೂ ಕಾಮಗಾರಿಗಳ ಗುತ್ತಿಗೆಗೆ ಸಂಬಂಧಿಸಿದ ಸೂಕ್ತ ಮಾಹಿತಿ
ಯನ್ನು ಬಹಿರಂಗಪಡಿಸದಿರಬಹುದು.

ಬಿಎಂಆರ್‌ಸಿಎಲ್, ಮಾಹಿತಿ ಹಕ್ಕು ಅಧಿನಿಯಮ 2005ರ 7,8,9 ಮತ್ತು 11 ನೇ ಪ್ರಕರಣಗಳಡಿ ಅರ್ಜಿದಾರನಿಗೆ ತಾನು ಬಹಿರಂಗಪಡಿಸಬೇಕಾದ ಬಾಧ್ಯತೆಯಿಲ್ಲದಿರುವಂಥ ವಿಷಯಗಳು/ದಾಖಲೆಗಳ ಒಂದು ಪಟ್ಟಿಯನ್ನು ಐದು ಪ್ರವರ್ಗಗಳಾಗಿ ವಿಂಗಡಿಸಲಾಗಿದೆ.

| ಕ್ರಮ ಸಂಖ್ಯೆ | ವಿಷಯ/ಬಾಬುಗಳು | ಪ್ರಕರಣಗಳು |
|---|---|---|
| 1 | ಅಂತಿಮ ತೀರ್ಮಾನ ತೆಗೆದುಕೊಳ್ಳುವ ವರೆಗೆ ಕಡತದಲ್ಲಿರುವ ಮಾತುಕತೆಯ/ಚರ್ಚೆಯ ದಾಖಲೆಗಳು | ಪ್ರಕರಣ 8(1)(ಐ) |
| 2 | ದೂರುದಾರನ/ಮಾಹಿತಿ ಹಕ್ಕು ಕಾರ್ಯಕರ್ತನ ಹೆಸರ ಮತ್ತು ವಿವರಗಳು | ಪ್ರಕರಣ 8(1)(ಜಿ) |
| 3 | ಸಂಸತ್ತು/ರಾಜ್ಯ ವಿಧಾನ ಮಾಡಲದ ಮುಂದೆ ಮಂಡಿಸುವುದಕ್ಕೆ ಮುನ್ನ ಸಂಸತ್ತು/ರಾಜ್ಯ ವಿಧಾನ ಮಂಡಲದ ಪ್ರಶ್ನೆಗಳ ಸಂಬಂಧದಲ್ಲಿ ಸರ್ಕಾರ/ಸಂಸತ್ತು/ ರಾಜ್ಯ ವಿಧಾನ ಮಂಡಲಕ್ಕೆ ಒದಗಿಸಲಾದ ಮಾಹಿತಿ | ಪ್ರಕರಣ 8(1)(ಸಿ) |
| 4 | ಯಾವುದೇ ನಿರ್ಣಾಯ ತೆಗೆದುಕೊಳ್ಳುವುದಕ್ಕಾಗಿ ಬಿಎಂಆರ್‌ಸಿ ನಿಯೋಜಿಸಿಕೊಂಡ ವಕೀಲರು ಅಥವಾ ತಜ್ಞರು ನೀಡಿದ ಸಲಹೆ/ಅಭಿಪ್ರಾಯ | ಪ್ರಕರಣ 8(1)(ಇ) |
| 5 | ಬಿಎಂಆರ್‌ಸಿಎಲ್ ಪರವಾಗಿ ಹಾಜರಾಗುವುದಕ್ಕಾಗಿ ಅಥವಾ ತಜ್ಞ ಕಾನೂನು ಅಭಿಪ್ರಾಯ ನೀಡುವುದಕ್ಕಾಗಿ ವಕೀಲರಿಗೆ ತಜ್ಞರುಗಳಿಗೆ ಪಾವತಿಸಿದ ವೃತ್ತಿ ಶುಲ್ಕ | ಪ್ರಕರಣ 8(1)(ಡಿ) ಮತ್ತ (ಜೆ) |
| 6 | ಕೃತಿ ಸ್ವಾಮ್ಯದ ಅತಿಲಂಘನವನ್ನು ಒಳಗೊಂಡ ಮಾಹಿತಿ | ಪ್ರಕರಣ 9 |

| | | |
|---|---|---|
| 7 | ಭದ್ರತೆಯನ್ನು ಪರಿಶೀಲಿಸಲು/ ಮೇಲ್ದರ್ಜೆಗೇರಿಸಲು ಕಾಲಕಾಲಕ್ಕೆ ಗೃಹ ವ್ಯವಹಾರಗಳ ಮಂತ್ರಾಲಯ (ಎಂಹೆಚ್ಎ), ನಗರಾಭಿವೃದ್ಧಿ ಮಂತ್ರಾಲಯ (ಎಂಒಯುಡಿ) ಗಳಲ್ಲಿ ಸಭೆಗಳ ನಡವಳಿಗಳು | ಪ್ರಕರಣ 8(1)(ಎ) |
| 8 | ಗುಪ್ತವಾರ್ತೆ ವಿಭಾಗ (ಐಟಿ) ಮತ್ತು ಇತರ ಭದ್ರತಾ ಏಜೆನ್ಸಿಗಳಿಂದ ಬಂದ ಗುಪ್ತ ಮಾಹಿತಿಗಳು | ಪ್ರಕರಣ 8(1)(ಎ) |
| 9 | ಭದ್ರತಾ ಲೆಕ್ಕಪರಿಶೋಧನಾ ವರದಿಗಳು | ಪ್ರಕರಣ 8(1)(ಎ) |
| 10 | ಬಿಎಂಆರ್‌ಸಿಎಲ್ ಸಾಧಿಲ್ವಾರು ಯೋಜನೆ (ಸರ್ಕಾರಿ ಏಜೆನ್ಸಿ ಗಳಿಗಾಗಿ ಮಾತ್ರ) | ಪ್ರಕರಣ 8(1)(ಎ) |
| 11 | ಸುರಕ್ಷತೆಗೆ ಸಂಬಂಧಿಸಿದ ಸುತ್ತೋಲೆಗಳು (ಸರ್ಕಾರಿ ಏಜೆನ್ಸಿಗಳಿಗೆ ಮಾತ್ರ) | ಪ್ರಕರಣ 8(1)(ಎ) |
| 12 | ತುರ್ತು ನಿರ್ವಹಣಾ ಯೋಜನೆ (ಸರ್ಕಾರಿ ಏಜೆನ್ಸಿಗಳಿಗೆ ಮಾತ್ರ) | ಪ್ರಕರಣ 8(1)(ಎ) |
| 13 | ತನಿಖಾ ಹಂತದಲ್ಲಿರುವ ಪ್ರಕರಣಗಳು | ಪ್ರಕರಣ 8(1)(ಹೆಚ್) |
| 14 | ಮೂರನೇ ಪಕ್ಷಕಾರನೊಂದಿಗೆ ಮಾಡಿಕೊಂಡ ಗುತ್ತಿಗೆ ಕರಾರುಗಳು | ಪ್ರಕರಣ 8(1)(ಡಿ) |
| 15 | ವಕೀಲರು/ ಸಮಾಲೋಚಕರು ಇತರ ತಜ್ಞರುಗಳಿಂದ ಪಡೆದ ಅಭಿಪ್ರಾಯ | ಪ್ರಕರಣ 8(1)(ಇ) |
| 16 | ಭದ್ರತಾ ವ್ಯವಸ್ಥೆಯ ಯಾವುದೇ ವಿವರಗಳು | ಪ್ರಕರಣ 8(1)(ಎ) |
| 17 | ನೋವಾ/ಕಾವೆಂಟ್ ಅಂಕಿ ಅಂಶಗಳು/ ಪತ್ರ ವ್ಯವಹಾರಗಳು | ಪ್ರಕರಣ 11 (1) |
| 18 | "ಮೂರನೇ ಪಕ್ಷಕಾರ ಮಾಹಿತಿ" ಗೆ ಸಂಬಂಧಿಸಿದ ಮಾಹಿತಿ | ಪ್ರಕರಣ 11 (1) |
| 19 | ಕೆಲವು ಮಹತ್ವದ ಮಾಹಿತಿಯನ್ನು ಕೋರಿದ್ದು ಹೊರತು ಕೊಂದುಕೊರತೆ ನಿವಾರಣೆಗೆ ಸಂಬಂಧಿಸಿದಂತೆ ಬಂದ ಯಾವುದೇ ಅರ್ಜಿ | ಪ್ರಕರಣ 2 (ಎಫ್) |
| 20 | ಈ ಪ್ರಶ್ನೆಗಳಿಗೆ ಉತ್ತರ ಮಹತ್ವದ ಸ್ವರೂಪದಲ್ಲಿದ್ದ ಹೊರತು ಏಕೆ, ಹೇಗೆ, ಏನು ಮೊದಲಾದಂಥ ಪ್ರಶ್ನೆಗಳು. ಅರ್ಜಿದಾರನ ಮೇಲಿನ ಪ್ರಶ್ನೆಗೆ ಉತ್ತರಿಸಲು ಮಾಹಿತಿಯನ್ನು ಸೃಜಿಸತಕ್ಕದ್ದಲ್ಲ. | ಪ್ರಕರಣ 2 (ಎಫ್) |
| 21 | ಕಂಪ್ಯೂಟರ್ ಸಿಸ್ಟಂಗಳ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ | ಪ್ರಕರಣ 8 (1) (ಎ) |
| 22 | ಬಿಎಂಆರ್‌ಸಿಎಲ್ ನ ಸಂಪನ್ಮೂಲಗಳನ್ನು ಯಾವುದೇ ಅಸಮಾನವಾದ ರೀತಿಯಲ್ಲಿ ಬೇರೆಡೆ ತಿರುಗಿಸುವುದಕ್ಕೆ ಅವಕಾಶ ನಿಡುವ ಅಥವಾ ಪ್ರತ್ಯೇಕ ದಾಖಲೆಯ ಸುರಕ್ಷತೆ ಅಥವಾ ಸಂರಕ್ಷಣೆಗೆ ಧಕ್ಕೆಯುಂಟಾಗಲಿರುವ ಯಾವುದೇ ಮಾಹಿತಿ | ಪ್ರಕರಣ 7(9) |
| 23 | ಗಿರಾಕಿ (ಕ್ಲೈಂಟ್)ಗಳ ವೈಯಕ್ತಿಕ ಮಾಹಿತಿ | ಪ್ರಕರಣ 8 (1)(ಜೆ) ಮತ್ತು 11(1) |
| 24 | ಯಾವುದೇ ವಸ್ತು ರೂಪದಲ್ಲಿ ಲಭ್ಯವಿಲ್ಲದಿರುವ ಪ್ರಶ್ನೆ ಅಭಿಪ್ರಾಯ, ಸಲಹೆ ಇತ್ಯಾದಿಗಳ ರೂಪದಲ್ಲಿರುವ ಮಾಹಿತಿ ಹಕ್ಕು ಅಧಿನಿಯಮದಡಿಯ ಪ್ರಶ್ನೆ | ಪ್ರಕರಣ 2 (ಎಫ್) |
| 25 | ನಂಬಿಕೆ ವಿಶ್ವಾಸದ ಸಂಬಂಧದಲ್ಲಿ ಬಿಎಂಆರ್‌ಸಿಎಲ್ ನಲ್ಲಿ ಲಭ್ಯವಿರುವ ಮೂರನೇ ಪಕ್ಷಕಾರನ ಮಾಹಿತಿ | ಪ್ರಕರಣ 8 (1) (ಇ) |
| 26 | ಮೂರನೇ ಪಕ್ಷಕಾರನ ವಾಣಿಜ್ಯ ರಹಸ್ಯಕ್ಕೆ ಸಂಬಂಧಿಸಿದ ಮಾಹಿತಿ | ಪ್ರಕರಣ 11 (1) |
| 27 | ಮೂರನೇ ಪಕ್ಷಕಾರನ ವೈಯಕ್ತಿಕ ಮಾಹಿತಿ | ಪ್ರಕರಣ 8 (1)(ಜೆ) ಮತ್ತು 11(1) |
| 28 | ಟೆಂಡರ್ ಸಮಿತಿ, ಬೆಲೆ ನಿರ್ಣಯ ಸಮಿತಿಯ ಸದ್ಯಸರ ಹೆಸರು, ವಿಳಾಸ ಮತ್ತು ಅರ್ಹತೆ | ಪ್ರಕರಣ 8 (1) (ಜಿ) |
| 29 | ಮೂರನೇ ಪಕ್ಷಕಾರನ ತಾಂತ್ರಿಕ ಮತ್ತು ಆರ್ಥಿಕ ಅಂಶಗಳಿಗೆ ಸಂಬಂಧಿಸಿದ ಮಾಹಿತಿ ಇರುವ ಕಡತದಲ್ಲಿನ ಟೆಂಡರ್ ಸಮಿತಿ, ಬೆಲೆ ನಿರ್ಣಯ ಸಮಿತಿಯ ಮಾತುಕತೆ/ಚರ್ಚೆಯ ಛಾಯಾ ಪ್ರತಿಗಳು) | ಪ್ರಕರಣ 11 (1) |
| 30 | ಮೆಟ್ರೋ ಯೋಜನೆಯ ವಿಸ್ತೃತ ಯೋಜನಾ ವರದಿಗಳು | ಪ್ರಕರಣ 8 (1)(ಡಿ) ಮತ್ತು 8(1) (ಇ) |

| | | |
|---|---|---|
| 31 | ಭವಿಷ್ಯದ ಯೋಜನೆಗಳು ಮತ್ತು ಕಾರ್ಯತಂತ್ರಗಳು | ಪ್ರಕರಣ 8 (1) (ಎ) |
| 32 | ರಹಸ್ಯ ಖಂಡಗಳಿರುವ ಚಾಲ್ತಿಯಲ್ಲಿರುವ ಗುತ್ತಿಗೆಗಳು | ಪ್ರಕರಣ 8 (1) (ಡಿ) ಮತ್ತು 11 (1) |
| 33 | ಕಾಮಗಾರಿಯ ವಿಧಾನ ವಿವರ ಪಟ್ಟಿಗಳು | ಪ್ರಕರಣ 8 (1) (ಡಿ) |
| 34 | ನಿರ್ದಿಷ್ಟ ಸ್ಮಾರ್ಟ್ ಕಾರ್ಡ್/ಟೋಕನ್ ವಿವರಗಳು | ಪ್ರಕರಣ 8 (1) (ಜೆ) ಮತ್ತು 11 |
| 35 | ನಿಲ್ದಾಣ ಆವರಣಗಳ ಸಿಸಿಟಿವಿ ದೃಶ್ಯಾವಳಿ (ಇದನ್ನು ತನಿಖೆಯ ಉದ್ದೇಶಗಳಿಗಾಗಿ ಮಾತ್ರವೇ ಪೊಲೀಸ್ ನಂಥಹ ಭದ್ರತಾ ಏಜೆನ್ಸಿಗಳಿಗೆ ನೀಡಬಹುದಾಗಿದೆ) | ಪ್ರಕರಣ 8 (1) (ಎ) |
| 36 | ರೇಡಿಯೋ ರೆಕಾರ್ಡಿಂಗ್ (ನಿರ್ಣಾಯಕ ಸಂವಹನವಾಗಿರುವ) | ಪ್ರಕರಣ 8 (1) (ಎ) |
| 37 | ಆಸ್ತಿ ಅಭಿವೃದ್ಧಿ/ಆಸ್ತಿ ವ್ಯವಹಾರಕ್ಕೆ ಸಂಬಂಧಿಸಿದ ಆಂತರಿಕ ಮಾರುಕಟ್ಟೆ ಕಾರ್ಯತಂತ್ರ. ಆದಾಗ್ಯೂ ಅನುಷ್ಠಾನಗೊಂಡ ನಂತರ, ಇದನ್ನು ವೆಬ್‌ಸೈಟ್ ಮೂಲಕ ಸಾರ್ವಜನಿಕರಿಗೆ ದೊರೆಯುವಂತೆ ಮಾಡಲಾಗುವುದು | ಪ್ರಕರಣ 8 (1) (ಡಿ) |
| 38 | ಟೆಂಡರ್ ಪ್ರಕ್ರಿಯೆಯಲ್ಲಿ ಬಹಿರಂಗಪಡಿಸಿದ್ದ ಹೊರತು ಆಸ್ತಿ ಅಭಿವೃದ್ಧಿ/ ಆಸ್ತಿ ವ್ಯವಹಾರಕ್ಕೆ ಸಂಬಂಧಿಸಿದ ಮೀಸಲು ಬೆಲೆ | ಪ್ರಕರಣ 8 (1) (ಡಿ) |
| 39 | ಸಾಧನ ಸಲಕರಣೆಗಳ ನಕ್ಷೆಗಳು | ಪ್ರಕರಣ 8 (1) (ಡಿ), 9 |
| 40 | ನಿಯೋಜಿಸಿಕೊಳ್ಳಲಾದ ಭದ್ರತಾ ಸಿಬ್ಬಂದಿಯ ವಿವರಗಳು | ಪ್ರಕರಣ 8 (1) (ಎ) |
| 41 | ಸಿಸ್ಟಂನಲ್ಲಿ ಅಳವಡಿಸಲಾದ ಸುರಕ್ಷತಾ/ಭದ್ರತಾ ಸಲಕರಣೆಗಳ ವಿವರಗಳು | ಪ್ರಕರಣ 8 (1) (ಎ) |
| 42 | ಅಣಕು ಕವಾಯತುಗಳ (ಮಾಕ್ ಡ್ರಿಲ್ಸ್) ವಿವರ | ಪ್ರಕರಣ 8 (1) (ಎ) |
| 43 | ಮೆಟ್ರೋ ಸ್ಥಾಪನೆಗಳು /ಕಟ್ಟಡಗಳು / ವಿನ್ಯಾಸಗಳು ಇತ್ಯಾದಿಗಳ ಆಂತರಿಕ ವಿಸ್ತೃತ ಯೋಜನೆ, ವಿನ್ಯಾಸ ಮತ್ತು ವಿಶಿಷ್ಟತೆಗಳು | ಪ್ರಕರಣ 8 (1) (ಎ) |
| 44 | ಕಾರ್ಯ ಮತ್ತು ಪಾಲನೆ ಕೈಪಿಡಿಗಳು | ಪ್ರಕರಣ 8 (1) (ಇ) |
| 45 | ಬಿಡ್ಡುದಾರರ ತಾಂತ್ರಿಕ ಮತ್ತು ಆರ್ಥಿಕ ಸಲ್ಲಿಕೆ | ಪ್ರಕರಣ 8(1)(ಡಿ) ಮತ್ತು 11 (1) |
| 46 | ಪ್ರಮಾಣಬದ್ಧ ಕಾರ್ಯನಿರ್ವಹಣಾ ಕಾರ್ಯವಿಧಾನಗಳು | ಪ್ರಕರಣ 8 (1) (ಎ) |
| 47 | ಬೆಂಗಳೂರು ಮೆಟ್ರೋ ರೈಲು ನಿಗಮದ ಬೆಲೆಕಟ್ಟಿದ ಪ್ರಕರಣಗಳು (ಛಾಯಾ ಪ್ರತಿಗಳನ್ನು ಒದಗಿಸುವುದಿಲ್ಲ, ಪ್ರಸ್ತಕ ಬೆಲೆಯನ್ನು ಪಾವತಿಸಿ ಯಾರು ಬೇಕಾದರೂ ಪುಸ್ತಕವನ್ನು ಖರೀದಿಸಬಹುದು) | ಪ್ರಕರಣ 9 |
| 48 | ವಿಪತ್ತುಗಳನ್ನು (ಬಾಂಬ್ ಸ್ಫೋಟ, ಭಯೋತ್ಪಾದಕರ ದಾಳಿ) ನಿಭಾಯಿಸುವ ವಿಪತ್ತು ನಿರ್ವಹಣಾ ಯೋಜನೆಗಳು | ಪ್ರಕರಣ 8 (1) (ಎ) |
| 49 | ಕಾರ್ಯನೀತಿ ರೂಪದಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳುವ ವರೆಗೆ ಪ್ರಯಾಣಿಕರ ಮಾರುಕಟ್ಟೆ ಕಾರ್ಯತಂತ್ರ | ಪ್ರಕರಣ 8 (1) (ಡಿ) |
| 50 | ವೈಫಲ್ಯಗಳ ವಿಚಾರಣೆ/ತನಿಖಾ ವರದಿಗಳು | ಪ್ರಕರಣ 8 (1) (ಎ) |
| 51 | ಏಜೆನ್ಸಿಗಳ/ಗುತ್ತಿಗೆದಾರರ ಮೂಲಕ ನಿಯೋಜನೆಗೊಂಡ ಬಿಎಂಆರ್‌ಸಿಎಲ್ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಹೊರಗುತ್ತಿಗೆ ಸಿಬ್ಬಂದಿಯ ವಿವರಗಳು | ಪ್ರಕರಣ 8 (1) (ಜೆ) ಮತ್ತು 11 (1) |
| 52 | ಅಂತಿಮ ತೀರ್ಮಾನ ಕೈಗೊಳ್ಳುವ ವರೆಗೆ ದರ ನಿಗಧಿಗೆ ಸಂಬಂಧಿಸಿದ ಮಾಹಿತಿ | ಪ್ರಕರಣ 8 (1) (ಡಿ) |
| 53 | ಆಂತರಿಕ ಲೆಕ್ಕಪರಿಶೋಧನಾ ವರದಿಗಳು | ಪ್ರಕರಣ 8 (1) (ಎ) |
| 54 | ಮಾರಾಟಗಾರನ ಪಾವತಿ ವರದಿಗಳು | ಪ್ರಕರಣ 8 (1) (ಜೆ) |
| 55 | ಪ್ರಕ್ರಿಯೆ ಹಂತದಲ್ಲಿರುವ ಡಿ ಮತ್ತು ಎ / ಜಾಗೃತಿ ಪ್ರಕರಣಗಳಿಗೆ ಸಂಬಂಧಿಸಿದ ಮಾಹಿತಿ | ಪ್ರಕರಣ 8 (1) (ಹೆಚ್) ಮತ್ತು (ಜೆ) |
| 56 | ಮಾಹಿತಿ ಹಕ್ಕು ಅರ್ಜಿದಾರನನ್ನು ಹೊರತುಪಡಿಸಿ ನೌಕರರಿಂದ ಬಂದ ವರ್ಗಾವಣೆ ಕೋರಿಕೆ ಪತ್ರಗಳು/ ಮನವಿಗಳು/ ದಾಖಲೆಗಳು/ ತತ್ಸಂಬಂಧಿತ ಟಿಪ್ಪಣಿಗಳು ಹಾಗೂ ಇತರ ಪತ್ರ ವ್ಯವಹಾರಗಳು | ಪ್ರಕರಣ 8 (1) (ಇ) ಮತ್ತು (ಜೆ) |

| | | |
|---|---|---|
| 57 | ನೇಮಕಾತಿ ಪರೀಕ್ಷೆಯಲ್ಲಿನ ಇತರ ಅಭ್ಯರ್ಥಿಗಳ ( ಮಾಹಿತಿ ಹಕ್ಕು ಅರ್ಜಿದಾರನ ಅಂಕಗಳನ್ನು ಹೊರತುಪಡಿಸಿ) ಅಂಕಗಳು. ಯಾರೇ ಆಗಲಿ ತಮ್ಮ ಸ್ವಂತ ಅಂಕಗಳನ್ನು ನೋಡಬಹುದು | ಪ್ರಕರಣ 8 (1) (ಜೆ) |
| 58 | ಆರ್‌ಡಿಎಂಒ ನಡೆಸಿದ ಬೌದ್ಧಿಕ ಸಾಮರ್ಥ್ಯ ಪರೀಕ್ಷೆಯಲ್ಲಿನ ಕಟ್ ಆಫ್ ಅಂಕಗಳು | ಪ್ರಕರಣ 8 (1) (ಇ) |
| 59 | ನೇಮಕಾತಿ ಪರೀಕ್ಷೆಯಲ್ಲಿ ಕಾಯ್ದಿರಿಸಿದ ಪಟ್ಟಿಯಲ್ಲಿರುವ ಅಭ್ಯರ್ಥಿಗಳು. ಆದರೂ, ಅಭ್ಯರ್ಥಿಯ ಸ್ಥಾನವನ್ನು ಅಭ್ಯರ್ಥಿಗೆ ಬಹಿರಂಗಪಡಿಸಬಹುದು | ಪ್ರಕರಣ 8 (1) (ಜೆ) |
| 60 | ಮಾಹಿತಿ ಹಕ್ಕು ಅಭ್ಯರ್ಥಿಯ ವಿವರಗಳನ್ನು ಬಿಟ್ಟು ಬೇರೆ ನೌಕರರ ಭವಿಷ್ಯ ನಿಧಿ (ಪಿ.ಎಫ್) ವಿವರಗಳು | ಪ್ರಕರಣ 8 (1) (ಜೆ) |
| 61 | ಬೇರೆಯವರ (ಮಾಹಿತಿ ಹಕ್ಕು ಅರ್ಜಿದಾರರ ವಿವರಗಳನ್ನು ಹೊರತುಪಡಿಸಿ) ವೇತನ ಮತ್ತು ಭತ್ಯಗಳು | ಪ್ರಕರಣ 8 (1) (ಜೆ) |
| 62 | ನೇಮಕಾತಿ ಪರೀಕ್ಷೆಯಲ್ಲಿ ಸಂದರ್ಶನ ಸಮಿತಿಯ ಸದಸ್ಯರ ಗುರುತು | ಪ್ರಕರಣ 8 (1) (ಜಿ) |
| 63 | ಮಾಹಿತಿ ಒದಗಿಸುವುದರಿಂದ ದೂರುದಾರರ ಏಕಾಂತತೆಗೆ ಭಂಗತರಬಹುದಾದ ಲೈಂಗಿಕ ಕಿರುಕುಳ ಪ್ರಕರಣಗಳು | ಪ್ರಕರಣ 8 (1) (ಜೆ) |
| 64 | ಮಾಹಿತಿ ಹಕ್ಕು ಅರ್ಜಿದಾರರನ್ನು ಹೊರತುಪಡಿಸಿ ಬೇರೆ ಬಿಎಂಆರ್‌ಸಿಎಲ್ ನೌಕರರ ಎಸಿಆರ್/ಎಪಿಎಆರ್ ದರ್ಜೀಕರಣ | ಪ್ರಕರಣ 8 (1) (ಜೆ) |
| 65 | ಯಾವ ನೌಕರರ ವಿರುದ್ಧ ಡಿಪಿಆರ್/ಜಾಗೃತಿ ಪ್ರಕರಣಗಳು ಬಾಕಿ ಇವೆಯೋ ಆ ನೌಕರರ ಪಟ್ಟಿ | ಪ್ರಕರಣ 8 (1) (ಜೆ) |
| 66 | ಮಾಹಿತಿ ಹಕ್ಕು ಅರ್ಜಿದಾರರ ಸೇವಾ ದಾಖಲೆಗಳನ್ನು ಬಿಟ್ಟು ಬೇರೆ ನೌಕರರ ಸೇವಾ ದಾಖಲೆಗಳು | ಪ್ರಕರಣ 8 (1) (ಜೆ) |
| 67 | ಇಲಾಖಾ ಮುಂಬಡ್ತಿ ಸಮಿತಿ ಸದಸ್ಯರ ಹೆಸರು | ಪ್ರಕರಣ 8 (1) (ಜಿ) |
| 68 | ಮಾಹಿತಿ ಹಕ್ಕು ಅರ್ಜಿದಾರನ ವಿವರಗಳನ್ನು ಹೊರತುಪಡಿಸಿ ಬೇರೆ ನೌಕರರ ಎಲ್‌ಟಿಸಿ/ವೈದ್ಯಕೀಯ ಬಿಲ್ಲುಗಳ ವಿವರಗಳು | ಪ್ರಕರಣ 8 (1) (ಜೆ) |
| 69 | ಯಾರೇ ನೌಕರನ ಕುಟುಂಬ ವಿವರಗಳು/ವೈವಾಹಿಕ ಸ್ಥಿತಿ | ಪ್ರಕರಣ 8 (1) (ಜೆ) |
| 70 | ಬೇರೆ ನೌಕರನ ಉತ್ತರದ ಹಾಳೆಗಳು. ಆದಾಗ್ಯೂ, ಅರ್ಜಿದಾರನು ತನ್ನ ಸ್ವಂತ ಉತ್ತರದ ಹಾಳೆಗಳನ್ನು ಒದಗಿಸುವಂತೆ ಕೋರಿದರೆ, ಮಾಹಿತಿ ಹಕ್ಕು ಅಧಿನಿಯಮ, 2005ರ ಪ್ರಕರಣ 10(2) ರಡಿ ಮೌಲ್ಯಮಾಪಕರ ಹೆಸರನ್ನು ಬೇರ್ಪಡಿಸಿ ಒದಗಿಸಲಾಗುತ್ತದೆ. | ಪ್ರಕರಣ 8 (1) (ಜೆ) |
| 71 | ಬಿಎಂಆರ್‌ಸಿಎಲ್ ನೌಕರರ ಮನೆಯ ವಿಳಾಸ (ಯಾವುದೇ ರೂಪದಲ್ಲಿ ನೌಕರರ ವಿಳಾಸ) | ಪ್ರಕರಣ 8 (1) (ಜೆ) ಮತ್ತು 11 |
| 72 | ಭವಿಷ್ಯನಿಧಿ, ಗ್ರ್ಯಾಚುಟಿ ಇತ್ಯಾದಿಗಳಿಗಾಗಿ ನೌಕರನು ಮಾಡಿದ ನಾಮನಿರ್ದೇಶನಗಳು | ಪ್ರಕರಣ 8 (1) (ಜೆ) |

(ವ್ಯವಸ್ಥಾಪಕ ನಿರ್ದೇಶಕರು, ಬಿಎಂಆರ್‌ಸಿಎಲ್ – ಇವರ ಅನುಮೋದನೆಯನ್ನು ಪಡೆದು ಹೊರಡಿಸಲಾಗಿದೆ)

ಸಹಿ/–

ಪ್ರಧಾನ ವ್ಯವಸ್ಥಾಪಕರು (ಮಾನವ ಸಂಪನ್ಮೂಲ)

**ಮಾಹಿತಿ ಪ್ರತಿ,**

- ಮಾಹಿತಿಗಾಗಿ ಬಿಎಂಆರ್‌ಸಿಎಲ್ ನ ಎಲ್ಲಾ ಮುಖ್ಯಸ್ಥರು
- ಕಂಪನಿ ಕಾರ್ಯದರ್ಶಿ, ಮಾಹಿತಿಗಾಗಿ ಬಿಎಂಆರ್‌ಸಿಎಲ್